KABR420000802017

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ದೊಡ್ಡಬಳ್ಳಾಪುರ**

**:ಉಪಸ್ಥಿತರು:**

**ಶ್ರೀಮತಿ ಪ್ರೀತಿ.ಕೆ., ಎಲ್.ಎಲ್.ಎಂ.,**

ಅಪರ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ದೊಡ್ಡಬಳ್ಳಾಪುರ

**ದಿನಾಂಕ 21 ನೇ ಏಪ್ರಿಲ್, 2026**

**ಸಿ.ಸಿ ಸಂಖ್ಯೆಃ 54/2017**

**ಪಿರ್ಯಾದಿ :** ದೊಡ್ಡಬೆಳವಂಗಲ ಪೊಲೀಸ್ ಠಾಣೆ
**(ಸಹಾಯಕ ಸರ್ಕಾರಿ ಅಭಿಯೋಜಕರು)**

**// ವಿರುದ್ಧ //**

**ಆರೋಪಿ/ಗಳು** **1** ಶ್ರೀಮತಿ. ಹುಚ್ಚಮ್ಮ
ಕೋಂ ಪುಟ್ಟರಂಗಯ್ಯ,
ವಯಸ್ಸು **55** ವರ್ಷಗಳು,

**2.** ರಂಗನಾಥ
ಬಿನ್ ಲೇಟ್ ಹನುಮಂತರಾಯಪ್ಪ
ವಯಸ್ಸು **60** ವರ್ಷಗಳು

**ಇಬ್ಬರ ವಾಸಃ**
ಚಿಕ್ಕ ಹೆಜ್ಜಾಜಿ ಗ್ರಾಮ,
ದೊಡ್ಡಬೆಳವಂಗಲ ಹೋಬಳಿ,
ದೊಡ್ಡಬಳ್ಳಾಪುರ ತಾಲ್ಲೂಕು,

ಬೆಂಗಳೂರು ಗ್ರಾಮಾಂತರ ಜಿಲ್ಲೆ.

**(ಶ್ರೀ ಎ. ಎನ್.ಎಲ್.ಕೆ ., ವಕೀಲರು)**

**:ತೀರ್ಪು:**

ದೊಡ್ಡಬೆಳವಂಗಲ ಪೋಲೀಸ್ ಠಾಣಾ ಆರಕ್ಷಕ ಉಪ ನಿರೀಕ್ಷಕರು ಆರೋಪಿತರ ವಿರುದ್ಧ ಭಾ.ದಂ.ಸಂ.ಕಲಂ **447** ಸಹಕಲಂ **34** ಹಾಗೂ ಕಲಂ. **192(**ಎ**)** ಕರ್ನಾಟಕ ಭೂ ಕಂದಾಯ ಅಧಿನಿಯಮ **1964** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆ ಪ್ರಕರಣದ ಸಾರಾಂಶ ಈ ಕೆಳಗಿನಂತೆ ಇರುತ್ತದೆ.**

ದೊಡ್ಡಬೆಳವಂಗಲ ಪೋಲೀಸ್ ಠಾಣಾ ಸರಹದ್ದು, ದೊಡ್ಡಬಳ್ಳಾಪುರ ತಾಲ್ಲೂಕು ಚಿಕ್ಕಹೆಜ್ಜಾಜಿ ಗ್ರಾಮದ ಸರ್ವೆ ನಂ.14 ರಲ್ಲಿ 4 ಎಕರೆ 28 ಗುಂಟೆ ಸರ್ಕಾರದ ಗೋಮಾಳ ಜಮೀನು ಚಿಕ್ಕ ಹೆಜ್ಜಾಜಿ ಕಾಲೋನಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ ಮತ್ತು ಆಟದ ಮೈದಾನಕ್ಕೆ ಮಂಜೂರಾಗಿದ್ದು ಆರೋಪಿತರು ಉತ್ತರದ ದಿಕ್ಕಿನ ಕಡೆಗೆ 7 ಗುಂಟೆ ಜಮೀನನ್ನು ಕಬಳಿಸುವ ಉದ್ದೇಶದಿಂದ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಉಳುಮೆ ಮಾಡಿ ಆ ಮೂಲಕ ಆರೋಪಿತರ ವಿರುದ್ಧ ಮೇಲ್ಕಂಡ ಶಿಕ್ಷಾರ್ಹ ಅಪರಾಧ ಮಾಡಿರುವುದಾಗಿ ದೋಷಾರೋಪಣೆ ಪಟ್ಟಿ ಯನ್ನು ಸಲ್ಲಿಸಲಾಗಿದೆ.

**3.** ಈ ಪ್ರಕರಣದಲ್ಲಿ ಪೋಲಿಸರು ಪ್ರಥಮ ವರ್ತಮಾನ ಹೇಳಿಕೆ **(**ದೂರನ್ನು**)** ಸ್ವೀಕರಿಸಿ ಠಾಣಾ ಗುನ್ನಾ ಸಂಖ್ಯೆ **118/2016** ರಡಿಯಲ್ಲಿ ಪ್ರಕರಣ

ದಾಖಲಿಸಿ ತನಿಖೆಯನ್ನು ಕೈಗೊಂಡಿರುತ್ತಾರೆ. ತನಿಖೆಯ ನಂತರ ಆರೋಪಿತರ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ನ್ಯಾಯಲಯಕ್ಕೆ ಸಲ್ಲಿಸಿರುತ್ತಾರೆ.

**4.** ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ನ್ಯಾಯಾಲಯ ಆಪಾದಿಸಿದ ಅಪರಾಧಗಳಿಗೆ ಸಂಜ್ಞೇಯ ತೆಗೆದುಕೊಂಡು, ಆರೋಪಿತರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು ಮಾಡಿ ಸಮನ್ಸ್ ಹೊರಡಿಸಿರುತ್ತದೆ. ಆರೋಪಿತರು ಸಮನ್ಸ್ ಸ್ವೀಕಾರ ಮಾಡಿ ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ.

**5.** ದಂ.ಪ್ರ.ಸಂ.ಕಲಂ **207** ರಡಿಯಲ್ಲಿ ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ಆರೋಪಿತರಿಗೆ ನೀಡಿ, ದೋಷಾರೋಪಣೆಯನ್ನು ರಚಿಸಿ ತಿಳಿಯುವಂತೆ ಓದಿ ಹೇಳಿದಾಗ ಆರೋಪಿತರು ತಾವು ಯಾವುದೇ ತಪ್ಪು ಮಾಡಿಲ್ಲ ವಿಚಾರಣೆ ಆಗಬೇಕೆಂದು ಕೇಳಿಕೊಂಡಿರುತ್ತಾರೆ.

**6.** ಅಭಿಯೋಜನೆಯು ಆರೋಪಿತರ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತುಪಡಿಸುವ ಸಲುವಾಗಿ ಒಟ್ಟು 9 ಸಾಕ್ಷಿಗಳನ್ನು ವಿಚಾರಣೆಗೊಳಪಡಿಸಿ, ನಿಪಿ-1 ರಿಂದ 9 ದಾಖಲೆಗಳನ್ನು ಗುರುತಿಸಿಕೊಂಡಿರುತ್ತದೆ.

**7.** ಅಭಿಯೋಜನೆಯ ಪರ ಸಾಕ್ಷ್ಯಾಧಾರಗಳು ಪೂರ್ಣಗೊಂಡ ನಂತರ ದಂ.ಪ್ರ.ಸಂ.ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ದಾಖಲು ಮಾಡಿದ್ದು, ಆರೋಪಿತರು ಆರೋಪಣೆಯನ್ನು ಸಂಪೂರ್ಣವಾಗಿ ನಿರಾಕರಣೆ ಮಾಡಿರುತ್ತಾರೆ ಮತ್ತು ತಮ್ಮ ಪರ ಯಾವುದೇ ಸಾಕ್ಷ್ಯ ಇಲ್ಲವೆಂದು ನುಡಿದಿರುತ್ತಾರೆ.

**8.** ಅಭಿಯೋಜನೆ ಪರ ಹಾಗೂ ಆರೋಪಿತರ ಪರ ವಕೀಲರ ವಾದ ಕೇಳಲಾಯಿತು ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದ ನ್ಯಾಯಾಲಯದ ಸಮ್ಮುಖದಲ್ಲಿರುವ ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು.

**9.** ಮೇಲ್ಕಂಡ ಸಂಗತಿಗಳಿಂದ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

*__ಅಂಶ-1:__ ದೊಡ್ಡಬೆಳವಂಗಲ ಪೊಲೀಸ್ ಠಾಣಾ ಸರಹದ್ದು, ದೊಡ್ಡಬಳ್ಳಾಪುರ ತಾಲ್ಲೂಕು ಚಿಕ್ಕಹೆಜ್ಜಾಜಿ ಗ್ರಾಮದ ಸರ್ವೆ ನಂ.14 ರಲ್ಲಿ 4 ಎಕರೆ 28 ಗುಂಟೆ ಸರ್ಕಾರದ ಗೋಮಾಳ ಜಮೀನು ಚಿಕ್ಕ ಹೆಜ್ಜಾಜಿ ಕಾಲೋನಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡ ಮತ್ತು ಆಟದ ಮೈದಾನಕ್ಕೆ ಮಂಜೂರಾಗಿದ್ದು, ಆರೋಪಿತರು ಉತ್ತರದ ದಿಕ್ಕಿನ ಕಡೆಗೆ 7 ಗುಂಟೆ ಜಮೀನನ್ನು ಕಬಳಿಸುವ ಉದ್ದೇಶದಿಂದ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ ಉಳುಮೆ ಮಾಡಿ ಆ ಮೂಲಕ ಭಾ.ದಂ.ಸಂ.ಕಲಂ 447 ಸಹಕಲಂ 34 ಹಾಗೂ ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂಃ192(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂಬುದನ್ನು ಅಭಿಯೋಜನೆ ಸಂಶಯಾತೀತವಾಗಿ ರುಜುವಾತು ಪಡಿಸಿರುತ್ತದೆಯೇ*

*__ಅಂಶ-2ಃ__ ಏನು ಆದೇಶ ?*

**10.** ಈ ಮೇಲ್ಕಂಡ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಲಾಗಿದೆ.

ಅಂಶ 1 : **ನಕಾರಾತ್ಮಕವಾಗಿ**

ಅಂಶ 2 : ಅಂತಿಮ ಆದೇಶದಂತೆ

**__:ಕಾರಣಗಳು:__**

**1__1.ಅಂಶಃ-1ಃ__** ಆರೋಪಿತರ ವಿರುದ್ಧ ಹೊರಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಅಭಿಯೋಜನೆಯು ಪ್ರಾಸಾ-1 ರಿಂದ 9 ಸಾಕ್ಷಿಗಳನ್ನು

ವಿಚಾರಣೆಗೆ ಒಳಪಡಿಸಿಕೊಂಡಿದ್ದು, ನಿಪಿಃ1 ರಿಂದ ನಿಪಿಃ9 ದಾಖಲೆಗಳನ್ನು ಗುರುತಿಸಿಕೊಂಡಿರುತ್ತದೆ. ನಿಪಿ:1:ದೂರು, ನಿಪಿ :2: ಪಂಚನಾಮೆ, ನಿಪಿಃ3 ಮತ್ತು 4 ಪಹಣಿ, ನಿಪಿಃ5 ಮ್ಯುಟೇಶನ್ ಪ್ರತಿ, ನಿಪಿಃ6 ಸರ್ವೇ ನಕ್ಷೆ ನಿಪಿಃ7 ಗ್ರಾಮ ನಕ್ಷೆ , ನಿಪಿಃ8 ಅಧಿಕೃತ ಜ್ಞಾಪನ, ನಿಪಿಃ9 ಪ್ರಥಮ ವರ್ತಮಾನ ವರದಿಯಾಗಿರುತ್ತದೆ.

**12.** ಮುಂದುವರೆದು, ಅಭಿಯೋಜನೆ ಪರ ವಿಚಾರಣೆಗೊಳಪಡಿಸಲಾದ ಪ್ರಾಸಾ-1 ಈ ಪ್ರಕರಣದ ಪಿರ್ಯಾದಿಯಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 09.06.2016 ರಂದು ದೊಡ್ಡಬೆಳವಂಗಲ ಹೋಬಳಿ ಚಿಕ್ಕಹೆಜ್ಜಾಜಿ ಕಾಲೋನಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಸೇರಿದ ಸರ್ವೇ ನಂ.14 ರಲ್ಲಿ 4 ಎಕರೆ 28 ಗುಂಟೆ ಜಮೀನಿನಲ್ಲಿ 1 ನೇ ಆರೋಪಿಯು 7 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡು ಶೆಡ್ಡನ್ನು ನಿರ್ಮಿಸಿಕೊಂಡಿರುವುದಾಗಿ ಹಾಗೂ 2 ನೇ ಆರೋಪಿಯು 1 ಎಕರೆಯಷ್ಟು ಜಮೀನಿನ್ನು ಉಳುಮೆ ಮಾಡಿ ಒತ್ತುವರಿ ಮಾಡಿಕೊಂಡಿರುವುದಾಗಿ, ಸರ್ಕಾರಿ ಶಾಲೆಯ ಆಟದ ಮೈದಾನವನ್ನು ಒತ್ತುವರಿ ಮಾಡಿರುವ ಸಂಬಂದ ಆರೋಪಿತರ ವಿರುದ್ದ ನಿಪಿ-1 ರಂತೆ ದೂರು ನೀಡಿರುವುದಾಗಿ ಸಾಕ್ಷ್ಯ ನುಡಿದಿದ್ದಾರೆ.

**13**. ಮುಂದುವರೆದು**,** ಅಭಿಯೋಜನೆ ಪರ ವಿಚಾರಣೆಗೊಳಪಡಿಸಲಾದ ಪ್ರಾಸಾ-2 ಈ ಪ್ರಕರಣದಲ್ಲಿನ ಪ್ರತ್ಯಕ್ಷ ಹಾಗೂ ಪಂಚನಾಮೆ ಸಾಕ್ಷಿಯಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 09.06.2016 ರಂದು ದೊಡ್ಡಬೆಳವಂಗಲ ಹೋಬಳಿ ಚಿಕ್ಕಹೆಜ್ಜಾಜಿ ಕಾಲೋನಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ

ಸೇರಿದ ಸರ್ವೇ ನಂ. 14 ರಲ್ಲಿ 4 ಎಕರೆ 28 ಗುಂಟೆ ಜಮೀನಿನಲ್ಲಿ 1 ನೇ ಆರೋಪಿಯು 7 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡು ಷೆಡ್ಡನ್ನು ನಿರ್ಮಿಸಿಕೊಂಡಿದ್ದರು ಹಾಗೂ 2 ನೇ ಆರೋಪಿಯು 1 ಎಕರೆಯಷ್ಟು ಜಮೀನಿನ್ನು ಉಳುಮೆ ಮಾಡಿರುವುದಾಗಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿಗಳು ಸದರಿ ಜಮೀನನ್ನು ಸರ್ಕಾರಿ ಶಾಲೆಯ ಆಟದ ಮೈದಾನಕ್ಕಾಗಿ ಮಂಜೂರು ಮಾಡಿದ್ದು, ಒತ್ತುವರಿ ಸಂಬಂದ ಆರೋಪಿತರನ್ನು ಪ್ರಶ್ನಿಸಿದಾಗ, ಆರೋಪಿತರು ತಮ್ಮ ಮೇಲೆ ಗಲಾಟೆ ಮಾಡಿರುವುದಾಗಿ, ಸದರಿ ವಿಚಾರವನ್ನು ಚಾಸಾ-1 ರವರಿಗೆ ಲಿಖಿತವಾಗಿ ತಿಳಿಸಿರುವುದಾಗಿ, ನಂತರ ಪೋಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿ ತಮ್ಮ ಸಹಿಯನ್ನು ಪಡೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿದ್ದಾರೆ.

**14**. ಮುಂದುವರೆದು, ಅಭಿಯೋಜನೆ ಪರ ವಿಚಾರಣೆಗೊಳಪಡಿಸಲಾದ ಪ್ರಾಸಾ.3 ಪ್ರತ್ಯಕ್ಷ ಹಾಗೂ ಪಂಚನಾಮೆ ಸಾಕ್ಷಿಯಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನ ಚಿಕ್ಕಹೆಜ್ಜಾಜಿ ಕಾಲೋನಿಯಲ್ಲಿರುವ ಸರ್ವೇ ನಂ. 14 ರಲ್ಲಿ 4 ಎಕರೆ 28 ಗುಂಟೆ ಜಮೀನು ಸರ್ಕಾರಿ ಶಾಲೆಗೆ ಸೇರಿದ್ದು, ಸದರಿ ಜಮೀನನ್ನು ಜಿಲ್ಲಾಧಿಕಾಯರಿಯವರು ಮಂಜೂರು ಮಾಡಿರುವುದಾಗಿ, ಸದರಿ ಸ್ಥಳದಲ್ಲಿ ಶಾಲೆ ಕಟ್ಟಡ ಇರುವುದಾಗಿ, ಶಾಲೆಯ ಮುಖ್ಯೋಪಾಧ್ಯಾಯರು 1 ನೇ ಆರೋಪಿಯು 7 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುವುದಾಗಿ

ದೂರು ನೀಡಿದ್ದು, ಶಾಲೆಯ ಜಮೀನು ಒತ್ತುವರಿಯಾದ ಬಗ್ಗೆ ನಿಪಿ-2 ಪಂಚನಾಮೆಗೆ ಸಹಿಯನ್ನು ಶಾಲೆಯಲ್ಲಿ ಮಾಡಿರುವುದಾಗಿ ಸಾಕ್ಷ್ಯ ನುಡಿದಿದ್ದಾರೆ.

**15** ಮುಂದುವರೆದು, ಅಭಿಯೋಜನೆ ಪರ ವಿಚಾರಣೆಗೊಳಪಡಿಸಲಾದ ಪ್ರಾಸಾ.4 ಪಂಚನಾಮೆ ಸಾಕ್ಷಿಯಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ 2016 ರಲ್ಲಿ ಶಾಲೆಯ ಜಮೀನು ಒತ್ತುವರಿಯಾದ ಸಂಬಂದ ಪೋಲೀಸರು ಪಂಚನಾಮೆ ಕ್ರಮ ಜರುಗಿಸಿ ತನ್ನ ಸಹಿ ಪಡೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿದ್ದಾರೆ.

**16**. ಮುಂದುವರೆದು, ಅಭಿಯೋಜನೆ ಪರ ವಿಚಾರಣೆಗೊಳಪಡಿಸಲಾದ ಪ್ರಾಸಾ.5 ಪ್ರತ್ಯಕ್ಷ ಸಾಕ್ಷಿಯಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ಸುಮಾರು 3-4 ವರ್ಷಗಳ ಹಿಂದೆ ಸರ್ಕಾರ, ಸರ್ಕಾರಿ ಶಾಲೆಯ ಆಟದ ಮೈದಾನಕ್ಕಾಗಿ 4 ಎಕರೆ 28 ಗುಂಟೆ ಜಮೀನನ್ನು ಮಂಜೂರು ಮಾಡಿದ್ದು, ಸದರಿ ಜಮೀನಿನಲ್ಲಿ ಆರೋಪಿತರು 4 ಗುಂಟೆ ಜಮೀನಿನ ಒತ್ತುವರಿ ಮಾಡಿ ಉಳುಮೆ ಮಾಡುತ್ತಿದ್ದು, ಈ ಕುರಿತು ದೂರು ದಾಖಲಾಗಿರುತ್ತದೆ ಎಂಬುದಾಗಿ, ಪೋಲೀಸರಿಗೆ ಹೇಳಿಕೆ ನೀಡಿರುವುದಾಗಿ ಸಾಕ್ಷ್ಯ ನುಡಿದಿದ್ದಾರೆ.

**17**. ಮುಂದುವರೆದು, ಅಭಿಯೋಜನೆ ಪರ ವಿಚಾರಣೆಗೊಳಪಡಿಸಲಾದ ಪ್ರಾಸಾ.6 ತನಿಖಾಧಿಕಾರಿಯಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-2, 3, 5 ಮತ್ತು 6 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿದ್ದಾರೆ.

**18** ಮುಂದುವರೆದು, ಅಭಿಯೋಜನೆ ಪರ ವಿಚಾರಣೆಗೊಳಪಡಿಸಲಾದ ಪ್ರಾಸಾ.7 ತನಿಖಾಧಿಕಾರಿಯಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-7 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಾಗಿ, ಕೃತ್ಯ ನಡೆದ ಸ್ಥಳದ ಜಮೀನಿನ ದಾಖಲೆಗಳಾದ ಪಹಣಿ, ಮ್ಯುಟೇಷನ್ ಹಾಗೂ ನಕ್ಷೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿರುವುದಾಗಿ, ಆರೋಪಿತರ ವಿರುದ್ಧ ಸಾಕ್ಷ್ಯಧಾರಗಳು ಕಂಡು ಬಂದ ಮೇರೆಗೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿದ್ದಾರೆ.

**19** ಮುಂದುವರೆದು, ಅಭಿಯೋಜನೆ ಪರ ವಿಚಾರಣೆಗೊಳಪಡಿಸಲಾದ ಪ್ರಾಸಾ. 8 ಭೂಮಾಪಕರಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ಚಿಕ್ಕಹೆಜ್ಜಾಜಿ ಕಾಲೋನಿಯಲ್ಲಿದ್ದ ಸರ್ವೇ ನಂ 14 ರಲ್ಲಿನ ಸ್ಥಳವು ಸರ್ಕಾರಿ ಶಾಲೆಯ ಕಟ್ಟಡ ಆವರಣಕ್ಕಾಗಿ ಮಂಜೂರಾಗಿದ್ದು, ಶಾಲೆಯ ಮಖ್ಯಸ್ಥರ ಕೋರಿಕೆ ಮೇರೆಗೆ ಸದರಿ ಸ್ಥಳದ ನಕ್ಷೆಯನ್ನು ತಯಾರಿಸಿ ತಹಶೀಲ್ದಾರ್ ಕಛೇರಿಗೆ ವರದಿಯನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**20** ಮುಂದುವರೆದು, ಅಭಿಯೋಜನೆ ಪರ ವಿಚಾರಣೆಗೊಳಪಡಿಸಲಾದ ಪ್ರಾಸಾ.9. ತನಿಖಾಧಿಕಾರಿಯಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 18.07.2016 ರಂದು ಚಾಸಾ-1 ರವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇಧಿಸಿಕೊಂಡು, ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ-

2, 3 ಮತ್ತು 4 ರವರ ಸಮಕ್ಷಮ ಮಧ್ಯಾಹ್ನ 12-30 ರಿಂದ 1-30 ಗಂಟೆ ಸಮಯದವರಗೊ ಪಂಚನಾಮೆ ಕ್ರಮ ಜರುಗಿಸಿದ್ದಾಗಿ ಸಾಕ್ಷ ನುಡಿರುತ್ತಾರೆ.

**21**. ಮುಂದುವರೆದು, ಈ ಪ್ರಕರಣದಲ್ಲಿ ಹೆಜ್ಜಾಜೆ ಕಾಲೋನಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸರ್ವೇ ನಂ. 14 ರಲ್ಲಿ 4 ಎಕರೆ 28 ಗುಂಟೆ ಜಮೀನು ಮಂಜೂರಾಗಿದ್ದು, ಸದರಿ ಜಮೀನಿನಲ್ಲಿ 1 ನೇ ಆರೋಪಿ ಸುಮಾರು 7 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡು ಶೆಡ್ಡನ್ನು ನಿರ್ಮಿಸಿಕೊಂಡಿದ್ದು, ಹಾಗೂ 2 ನೇ ಆರೋಪಿಯು 1 ಎಕರೆಯಷ್ಟು ಜಮೀನನ್ನು ಅತಿಕ್ರಮಪ್ರವೇಶ ಮಾಡಿ ಉಳುಮೆ ಮಾಡಿರುತ್ತಾರೆಂದು ಆರೋಪಿಸಲಾಗಿರುತ್ತದೆ. ಈ ಪ್ರಕರಣದಲ್ಲಿ ಅಭಿಯೋಜನೆಯು 1 ನೇ ಆರೋಪಿ 7 ಗಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡು ಶೆಡ್ಡನ್ನು ನಿರ್ಮಿಸಿಕೊಂಡಿದ್ದಾರೆಂದು ಹಾಗೂ 2 ನೇ ಆರೋಪಿಯು 1 ಎಕರೆಯಷ್ಟು ಜಮೀನನ್ನು ಅತಿಕ್ರಮ ಪ್ರವೇಶ ಮಾಡಿ ಉಳುಮೆ ಮಾಡಿರುತ್ತಾರೆಂಬುದನ್ನು ಸ್ಥಾಪಿಸಬೇಕಾದ ಹೊಣೆ ಹೊಂದಿರುತ್ತದೆ.

**22**. ಮುಂದುವರೆದು, ಆರೋಪಿತರ ಮೇಲೆ ಹೊರಿಸಿರುವ ಆರೋಪಗಳನ್ನು ಸ್ಥಾಪಿಸಲು ಅಭಿಯೋಜನೆಯು ಸಾಕ್ಷಿಗೆ ಗುರಿಪಡಿಸಿರುವ ಮೌಖಿಕ ಸಾಕ್ಷ್ಯಗಳನ್ನು ಹಾಗೂ ಹಾಜರುಪಡಿಸಿರುವ ದಾಖಲಾತಿ ಸಾಕ್ಷ್ಯಗಳನ್ನು ಪರಿಶೀಲಿಸಿದಾಗ ನಿಪಿ-1 ದೂರಿನಲ್ಲಿ 1 ನೇ ಆರೋಪಿಯು ಶಾಲಾ ಜಮೀನಿನಲ್ಲಿ ಸುಮಾರು 7 ಗುಂಟೆ ಜಮೀನನ್ನು ಅತಿಕ್ರಮ ಪ್ರವೇಶ ಮಾಡಿ ಶೆಡ್ಡನ್ನು ನಿರ್ಮಿಸಿಕೊಂಡಿರುತ್ತಾರೆ ಎಂದು ಹಾಗೂ 2 ನೇ ಆರೋಪಿಯು ದಿನಾಂಕ 9-6-

2016 ರಂದು ಸಂಖ್ಯೆ ಇಲ್ಲದ ಟ್ರ್ಯಾಕ್ಟ ರನಲ್ಲಿ ಆಟದ ಮೈದಾನಕ್ಕೆ ಒಳಪಟ್ಟ ಸುಮಾರು 1 ಎಕರೆಯಷ್ಟು ಜಮೀನನ್ನು ಉಳುಮೆ ಮಾಡಿರುತ್ತಾರೆಂದು ಆರೋಪಿಸಿ ಆರೋಪಿತರ ವಿರುದ್ಧ ಕ್ರಮಗೈಕೊಳ್ಳಬೇಕೆಂದು ಕೋರಿಕೊಳ್ಳಲಾಗಿರುತ್ತದೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೇನೆಂದರೆ ಘಟನೆಯು ದಿನಾಂಕಃ 09-06-2016 ರಂದು ಆಗಿದೆ ಎಂದು ಹಾಗೂ ದಿನಾಂಕ 10.06.2016 ರಂದು ಒಂದು ದೂರನ್ನು ದಾಖಲಿಸಿದ್ದಾಗಿಯೂ ನಿಪಿ-1 ರಲ್ಲಿ ಬರೆಯಲಾಗಿದ್ದರೂ ಈ ಪ್ರಕರಣಕ್ಕೆ ಸಂಬಂಧಿಸಿದ ದೂರನ್ನು ದಿನಾಂಕ 18-07-2016 ರಲ್ಲಿ ದಾಖಲಿಸಿರುವುದು ಕಂಡುಬರುತ್ತದೆ. ಈ ಅಂಶವು ಘಟನಾ ದಿನಾಂಕಕ್ಕೂ ದೂರನ್ನು ದಾಖಲಿಸಿದ ದಿನಾಂಕಕ್ಕೂ ಸುಮಾರು 38 ದಿನಗಳು ತಡವಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ನಿಪಿ-1 ರಲ್ಲಿ ದಿನಾಂಕ 10-6-2016 ರಂದು ದೂರನ್ನು ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಳ್ಳದ ಕಾರಣ ದಿನಾಂಕ 18-7-2016 ರಂದು ಮತ್ತೊಂದು ದೂರನ್ನು ದಾಖಲಿಸಿದ್ದಾಗಿ ಬರೆಯಲಾಗಿರುತ್ತದೆ. ಸದರಿ ವಿಚಾರವನ್ನೇ ಪ್ರಾಸಾ-1 ತಮ್ಮ ಸಾಕ್ಷ್ಯದಲ್ಲಿಯೂ ನುಡಿದಿರುತ್ತಾರೆ. ಆದರೆ ದಿನಾಂಕಃ10.06.2016 ರಂದು ಈ ವಿಚಾರವಾಗಿ ದೂರನ್ನು ದಾಖಲಿಸಿದ ಬಗ್ಗೆ ಯಾವುದೇ ದಾಖಲಾತಿ ಸಾಕ್ಷ್ಯಗಳನ್ನು ಅಭಿಯೋಜನೆ ಹಾಜರುಪಡಿಸಿರುವುದಿಲ್ಲ. ಸಾಮಾನ್ಯವಾಗಿ ಒಂದು ದೂರನ್ನು ದಾಖಲಿಸಿದಾಗ ಅದಕ್ಕೆ ಸಂಬಂಧಿಸಿದಂತೆ ಒಂದು ಸ್ವೀಕೃತಿಯನ್ನು ಕೊಡಲಾಗುತ್ತದೆ. ಆದರೆ ಸದರಿ ಸ್ವೀಕೃತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ.

ಅಲ್ಲದೇ, ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೇನೆಂದರೆ ನಿಪಿ 9 ಪ್ರಥಮ ವರ್ತಮಾನ ವರದಿಯಲ್ಲಿ ದೂರನ್ನು ಮೇಲಾಧಿಕಾರಿಗಳಿಗೆ ತಿಳಿಸಿ ತಡವಾಗಿ ಬಂದು ದೂರು ನೀಡಲಾಗಿರುತ್ತದೆ ಎಂದು ನಮೂದಿಸಲಾಗಿದೆ. ನಿಪಿ-1 ರಲ್ಲಿ ದಿನಾಂಕಃ 10.06.2016 ರಂಂದು ನೀಡಿದ ದೂರಿನ ಮೇರೆಗೆ ಯೂವುದೇ ಕ್ರಮ ಕೈಗೊಳ್ಳದ ಕಾರಣ ದಿನಾಂಕಃ18.07.2016 ರಂದು ದೂರನ್ನು ದಾಖಲಿಸಲಾಗಿತ್ತು ಎಂದು ಬರೆಯಲಾಗಿದ್ದರೂ ನಿಪಿ-9 ರಲ್ಲಿ ಬೇರೆಯೇ ಕಾರಣವನ್ನು ತೋರಿಸಲಾಗಿದೆ. ಈ ವಿಚಾರಗಳು ದೂರನ್ನು ತಡವಾಗಿ ದಾಖಲಿಸಿದ್ದರ ಬಗ್ಗೆ ಒಂದು ಸಮಂಜಸವಾದ ಕಾರಣವನ್ನು ಅಭಿಯೋಜನೆ ನೀಡುವಲ್ಲಿ ವಿಫಲವಾಗಿದೆ ಎಂದೇ ಹೇಳಬೇಕಾಗತ್ತದೆ.

**23**. ಮುಂದುವರೆದು, ಇಲ್ಲಿ ಗಮನಿಸಬೇಕಾದ ಅಂತವೇನೆಂದರೆ ದೂರನ್ನು ನೀಡಿರುವ ವ್ಯಕ್ತಿ ಯಾವುದೇ ಒಬ್ಬ ಸಾಮಾನ್ಯ ವ್ಯಕ್ತಿಯಲ್ಲ ಬದಲಿಗೆ ಒಂದು ಸರ್ಕಾರಿ ಅಧಿಕಾರಿಯಾಗಿದ್ದು, ತಾವು ಕೊಟ್ಟಂತಹ ದೂರಿಗೆ ಸಕಾಲದಲ್ಲಿ ಕ್ರಮ ಕೈಗೊಳ್ಳದ ಸಂದರ್ಭದಲ್ಲಿ, ಕಾನೂನಾತ್ಮಕವಾಗಿ ಕೈಗೊಳ್ಳಬೇಕಾದ ಕ್ರಮವನ್ನು ಕೈಗೊಳ್ಳದೆ ತಡವಾಗಿ ಮತ್ತೊಂದು ದೂರನ್ನು ದಾಖಲಿಸಲಾಗಿದೆ ಎಂಬ ಅಂಶವೇ ಅಸಹಜವೆನಿಸುತ್ತದೆ. ಅಲ್ಲದೇ, ಪ್ರಾಸಾ-1 ತಮ್ಮ ಪಾಟೀ ಸವಾಲಿನಲ್ಲಿ ಜಮೀನು ಅತಿಕ್ರಮಣವಾಗಿದೆ ಎಂಬ ಮಾಹಿತಿಯನ್ನು ಶಾಲೆಯ ಮುಖ್ಯೋಪದ್ಯಾಯರು ತಮಗೆ ದಿನಾಂಕ 9-6-2016 ರಲ್ಲಿಯೇ ಲಿಖಿತವಾಗಿ ಕೊಟ್ಟಿದ್ದರು ಎಂದು ನುಡಿದಿರುತ್ತಾರೆ. ಆದರೆ, ಸದರಿ ದಾಖಲೆಯನ್ನು ಕೂಡ ಈ ಪ್ರಕರಣದಲ್ಲಿ ಹಾಜರಪಡಿಸಿರುವುದಿಲ್ಲ. ಆದ್ದರಿಂದ ಈ ಪ್ರಕರಣದಲ್ಲಿ ದೂರು ತಡವಾಗಿ

ದಾಖಲಾಗಿರುವ ಬಗ್ಗೆ ಯಾವುದೇ ನಂಬಲರ್ಹವಾದ ಕಾರಣವನ್ನು ಅಭಿಯೋಜನೆ ತೋರ್ಪಡಿಸಿರುವುದಿಲ್ಲ.

**24**. ಮುಂದುವರೆದು, ಈ ಪ್ರಕರಣದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಆಟದ ಮೈದಾನಕ್ಕಾಗಿ ಸುಮಾರು 4 ಎಕರೆ 28 ಗುಂಟೆ ಜಮೀನು ಮಂಜೂರಾಗಿತ್ತು ಎಂಬ ಬಗ್ಗೆ ತಕರಾರು ಇರುವುದಿಲ್ಲ. ಆದರೆ, ಇಲ್ಲಿ ಅಭಿಯೋಜನೆ ಆರೋಪಿಸಿರುವುದು ಸದರಿ ಜಮೀನಿನಲ್ಲಿ 1 ನೇ ಆರೋಪಿ 7 ಗುಂಟೆ ಜಮೀನನ್ನು ಹಾಗೂ 2 ನೇ ಆರೋಪಿ 1 ಎಕರೆಯಷ್ಟು ಜಮೀನನ್ನು ಅತಿಕ್ರಮ ಪ್ರವೇಶ ಮಾಡಿ ಒತ್ತುವರಿ ಮಾಡಿಕೊಂಡಿರುತ್ತಾರೆ ಎಂಬುದಾಗಿರುತ್ತದೆ. ಒಂದು ಜಮೀನನ್ನು ಅತಿಕ್ರಮ ಮಾಡಿ ಉಳುಮೆ ಮಾಡಿರುವಂತಹ ವಿಚಾರ ಸ್ಥಾಪಿಸಲು ಕೇವಲ ಮೌಖಿಕ ಸಾಕ್ಷ್ಯದ ಮೇಲೆ ಅಭಿಯೋಜನೆ ಅವಲಂಬಿತವಾಗಲು ಸಾಧ್ಯವಿಲ್ಲ. ಸದರಿ ಅಂಶವನ್ನು ಸ್ಥಾಪಿಸಲು ದಾಖಲಾತಿಯ ಸಾಕ್ಷ್ಯಗಳು ಅತ್ಯವಶ್ಯಕವಾಗಿರುತ್ತದೆ. ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತರು ಆರೋಪಿಸಿರುವಂತೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆಂಬುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

**25**. ಮುಂದುವರೆದು, ಪ್ರಾಸಾ-1 ತನ್ನ ಪಾಟೀ ಸವಾಲಿನಲ್ಲಿ ಸರ್ವೇ ನಂ.14 ರ ಜಮೀನನ್ನು ತಾವು ಮಹಜರ್ ಮಾಡಿರುವುದಿಲ್ಲ ಎಂಬುದನ್ನು ನುಡಿದಿರುತ್ತಾರೆ. ಅದೇ ರೀತಿ ಸರ್ವೇ ನಂ. 14 ರ 4 ಎಕರೆ 28 ಗುಂಟೆ ಜಮೀನನ್ನು ಸರ್ವೇ ಮಾಡಿ ಗಡಿಯನ್ನು ನಿಗದಿಪಡಿಸಿಕೊಡುವಂತೆ ಕೋರಿ ತಹಶೀಲ್ದಾರ್

ರವರಿಗೆ ದಿನಾಂಕ 26-9-2014 ರಂದು ಮನವಿಯನ್ನು ಸಲ್ಲಿಸಿದ್ದಾಗಿ ನುಡಿದಿರುತ್ತಾರೆ. ಆದರೆ, ಸದರಿ ಮನವಿಯ ಆಧಾರದ ಮೇಲೆ ಜಮೀನಿನ ಸರ್ವೇಯನ್ನು ಕೈಗೊಂಡ ಬಗ್ಗೆ ತಮಗೆ ನೆನಪಿಲ್ಲವೆಂದು ನುಡಿದಿರುತ್ತಾರೆ. ಅದೇ ರೀತಿ ಸರ್ವೇ ಮಾಡಿಸಿದ ದಾಖಲೆಗಳನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ. ಇನ್ನೂ ಪ್ರಾಸಾ-2 ಶಾಲೆಯ ಮುಖ್ಯ ಶಿಕ್ಷಕರಾಗಿದ್ದು, ಅವರ ಸಾಕ್ಷ್ಯವನ್ನು ಗಮನಿಸಿದಾಗ ಸರ್ವೇ ನಂ. 14 ರ ಜಮೀನನ್ನು 2014 ರಲ್ಲಿ ಸರ್ವೇ ಮಾಡಿಸಲಾಗಿತ್ತು ಎಂದು ಹಾಗೂ 2014 ರ ನಂತರ 2 ಬಾರಿ ಜಮೀನನ್ನು ಸರ್ವೇ ಮಾಡಿಸಲಾಗಿತ್ತು ಎಂದು ತಮ್ಮ ಪಾಟೀ ಸವಾಲಿನಲ್ಲಿ ನುಡಿದಿರುತ್ತಾರೆ. ಆದರೆ, ಸದರಿ ಸರ್ವೇಗಳನ್ನು ಮಾಡುವಂತೆ ತಾವು ಕೋರಿಕೊಂಡಿಲ್ಲವೆಂದು ನುಡಿದಿರುತ್ತಾರೆ. ಅದೇ ರೀತಿ ಸರ್ವೇ ನಂ. 14 ರಲ್ಲಿ 4 ಎಕರೆ 28 ಗುಂಟೆ ಜಮೀನು ಸರ್ಕಾರಿ ಶಾಲೆಗೆ ಸೇರಿದ ಜಮೀನು ಎಂಬ ಬಗ್ಗೆ ಸರ್ವೇ ಮಾಡಿಸಿದ ದಾಖಲೆಗಳನ್ನು ತಾನು ತನ್ನ ಮೇಲಾಧಿಕಾರಿಗಳಿಗೆ ಕೊಟ್ಟಿರುವುದಾಗಿಯೂ ನುಡಿದಿರುತ್ತಾರೆ.

**26**. ಮುಂದುವರೆದು, ನಿಪಿ-3 ಮತ್ತು ನಿಪಿ-4 ಸರ್ವೇ ನಂ. 14 ರ ಪಹಣಿಯಾಗಿದ್ದು, ಸದರಿ ಪಹಣಿಯಲ್ಲಿ ಸರ್ವೇ ನಂ.14 ರಲ್ಲಿ ಸರ್ಕಾರಿ ಪಾಠಶಾಲೆಯ ಆಟದ ಮೈದಾನಕ್ಕಾಗಿ 4 ಎಕರೆ 28 ಗುಂಟೆ ಜಮೀನು ಮಂಜೂರಾದ ಬಗ್ಗೆ ದಾಖಲಿಸಲಾಗಿರುತ್ತದೆ. ನಿಪಿ- 5 ಮ್ಯೂಟೇಷನ್ ಪ್ರತಿಯಲ್ಲಿಯೂ 4 ಎಕರೆ 28 ಗುಂಟೆ ಸರ್ಕಾರಿ ಪಾಠ ಶಾಲೆಯ ಆಟದ

ಮೈದಾನಕ್ಕಾಗಿ ಜಮೀನು ಇರುವುದರ ಬಗ್ಗೆ ನಮೂದಿಸಲಾಗಿದೆ. ನಿಪಿ-6 ನಕ್ಷೆಯೂ ಸರ್ವೇ ನಂ. 14 ರಲ್ಲಿ 4 ಎಕರೆ 20 ಗುಂಟೆ ಜಾಗವನ್ನು ಶಾಲೆಗಾಗಿ ಮಂಜೂರು ಮಾಡಲು ಕೇಳಿರುವ ಜಾಗವನ್ನು ಗುರುತಿಸಿದಂತಹ ನಕ್ಷೆಯಾಗಿರುತ್ತದೆ. ನಿಪಿ- 4 ಕೂಡ ಆಟದ ಮೈದಾನಕ್ಕಾಗಿ ಗುರುತಿಸುವ ಜಾಗವನ್ನು ಗುರುತಿಸಿರುವ ನಕ್ಷೆಯಾಗಿರುತ್ತದೆ. ಈ ದಾಖಲೆಗಳು ತೋರ್ಪಡಿಸುವುದೇನೆಂದರೆ ಸರ್ಕಾರಿ ಶಾಲೆಗೆ ಸರ್ವೇ ನಂ. 14 ರಲ್ಲಿ 4 ಎಕರೆ 28 ಗುಂಟು ಜಮೀನು ಮಂಜೂರಾಗಿದ್ದು, ಸದರಿ ಅಂಶವು ರೆವೆನ್ಯೂ ದಾಖಲೆಗಳಲ್ಲಿಯೂ ದಾಖಲಾಗಿರುವುದು ಕಂಡುಬರುತ್ತದೆ. ಆದರೆ, ಸರ್ವೇ ನಂ. 14 ರಲ್ಲಿ 4 ಎಕರೆ 28 ಗುಂಟೆಗೆ ಗಡಿ ಗುರುತಿಸಿರುವ ಬಗ್ಗೆ ಸ್ಪಷ್ಟ ದಾಖಲೆಗಳನ್ನು ಅಭಿಯೋಜನೆ ಹಾಜರುಪಡಿಸಿರುವುದಿಲ್ಲ. ನಿಪಿ-8, ಸರ್ವೇ ನಂ. 14 ರಲ್ಲಿ 4 ಎಕರೆ 28 ಗುಂಟೆ ಜಮೀನನ್ನು ಸರ್ಕಾರಿ ಪಾಠಶಾಲೆಯ ಆಟದ ಮೈದಾನಕ್ಕಾಗಿ ಮಂಜೂರು ಮಾಡಿರುವ ಅಧಿಕೃತ ಜ್ಞಾಪನ ಪತ್ರವಾಗಿರುತ್ತದೆ. ಪ್ರಾಸಾ-8 ಭೂಮಾಪಕರಾಗಿದ್ದು, ಸದರಿಯವರು ತಮ್ಮ ಸಾಕ್ಷ್ಯದಲ್ಲಿ ನಕ್ಷೆಯನ್ನು ತಯಾರಿಸಿ ತಹಸೀಲ್ದಾರ್ ಕಚೇರಿಗೆ ವರದಿಯನ್ನು ಸಲ್ಲಿಸಿದ್ದ ಬಗ್ಗೆ ನಡಿದಿದ್ದು, ನಿಪಿ-6 ರಲ್ಲಿ ಜಾಗ ಒತ್ತುವರಿಯಾಗಿದೆ ಎಂಬುದನ್ನು ಬರೆದಿಲ್ಲ ಎಂಬುದನ್ನು ಒಪ್ಪಿರುತ್ತಾರೆ. ಈ ಯಾವುದೇ ದಾಖಲೆಗಳು 4 ಎಕರೆ 28 ಗುಂಟೆ ಸರ್ಕಾರಿ ಆಟದ ಮೈದಾನದ ಜಾಗದಲ್ಲಿ ಆರೋಪಿತರು ಅತಿಕ್ರಮ ಮಾಡಿರುತ್ತಾರೆ ಎಂಬುದನ್ನು ತೋರ್ಪಡಿಸಿರುವುದಿಲ್ಲ. ಈ ಎಲ್ಲಾ ದಾಖಲೆಗಳು ಕೇವಲ ಸರ್ವೇ ನಂ. 14 ರಲ್ಲಿ ನ 4 ಎಕರೆ 28 ಗುಂಟೆ ಜಮೀನು ಸರ್ಕಾರಿ ಆಟದ ಮೈದಾನಕ್ಕಾಗಿ

ಮಂಜೂರಾಗಿರುವ ಬಗ್ಗೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಇರುವ ದಾಖಲೆಗಳಾಗಿರುತ್ತದೆ. ಆದರೆ, ಈ ಪ್ರಕರಣದಲ್ಲಿರುವ ಆರೋಪವು ಸದರಿ ಭಾಗದ ಜಮೀನಿನ ಉತ್ತರ ಭಾಗದಲ್ಲಿ ಆರೋಪಿತರು ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂಬುದಾಗಿದ್ದು, ಅದಕ್ಕೆ ಸಂಬಂಧಿಸಿದಂತಹ ದಾಖಲೆಗಳನ್ನು ಹಾಜರುಪಡಿಸುವುದು ಅಭಿಯೋಜನ ಹೊಣೆಯಾಗಿದ್ದು, ಸದರಿ ದಾಖಲೆಯನ್ನು ಹಾಜರುಪಡಿಸದೇ ಇರುವುದು ಕಂಡಬಂದಿರುತ್ತದೆ.

**27**. ಮುಂದುವರೆದು, ನಿಪಿ-2 ಘಟನಾ ಸ್ಥಳದ ಪಂಚನಾಮೆ ಎಂಬುದಾಗಿ ಅಭಿಯೋಜನೆ ಹಾಜರುಪಡಿಸಿರುತ್ತದೆ. ನಿಪಿ-2 ಪಂಚನಾಮೆಯಲ್ಲಿಯೂ ಕೇವಲ ಸರ್ವೇ ನಂ.14 ರಲ್ಲಿ 4 ಎಕರೆ 20 ಗುಂಟೆ ಜಮೀನಿದ್ದು, ಇದರ ಉತ್ತರದ ಭಾಗದಲ್ಲಿ ಆರೋಪಿತರು ಜಮೀನನ್ನು ಅತಿಕ್ರಮ ಪ್ರವೇಶ ಮಾಡಿರುವುದಾಗಿ ಬರೆಯಲಾಗಿದ್ದರೂ, ಅದಕ್ಕೆ ಸಂಬಂಧಿಸಿದಂತಹ ಸ್ಪಷ್ಟ ಅಳತೆ ಕೈಗೊಂಡ ಮಾಹಿತಿ ಇರುವುದಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಸರ್ವೇ ನಂ. 14 ಕೇವಲ 4 ಎಕರೆ 28 ಗುಂಟೆ ಇರುವಂತಹ ಜಮೀನಾಗಿರುವುದಿಲ್ಲ, ಬದಲಿಗೆ ಒಟ್ಟು 30 ಎಕರೆ ವಿಸ್ತೀರ್ಣವಿರುವಂತಹ ಜಮೀನಾಗಿದ್ದು, ಅದರೊಳಗೆ 4 ಎಕರೆ 28 ಗುಂಟೆ ಜಮೀನು ಸರ್ಕಾರಿ ಶಾಲೆಯ ಆಟದ ಮೈದಾನಕ್ಕೆ ಮಂಜೂರಾಗಿರುವುದರಿಂದ, ಸದರಿ ಜಮೀನಿನ ಗಡಿರೇಖೆಗಳನ್ನು ಗುರುತಿಸದ ಹೊರತಾಗಿ ಆರೋಪಿತರು ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂಬ ಅಂಶವನ್ನು ರುಜುವಾತುಪಡಿಸಲು ಸಾಧ್ಯವೇ ಆಗುವುದಿಲ್ಲ. ಅಲ್ಲದೇ ಇಲ್ಲಿ ಗಮನಿಸಬೇಕಾದ ಮತ್ತೊಂದು

ಅಂಶವೇನೆಂದರೆ ಸರ್ವೇ ನಂ. 14 ರಲ್ಲಿಯೇ ಆರೋಪಿತರಿಗೂ ಜಮೀನು ಮಂಜೂರಾಗಿರುತ್ತದೆ. ಸದರಿ ಅಂಶವನ್ನು ಪ್ರಾಸಾ-2, ಪ್ರಾಸಾ-5 ತಮ್ಮ ಪಾಟೀ ಸವಾಲಿನಲ್ಲಿ ಒಪ್ಪಿರುತ್ತಾರೆ. ಪ್ರಾಸಾ-5 ತಮ್ಮ ಪಾಟಿ ಸವಾಲಿನಲ್ಲಿ ಚಿಕ್ಕಹೆಜ್ಜಾಜಿ ತನ್ನ ಹುಟ್ಟೂರೆಂದು, ಸದರಿ ಗ್ರಾಮದಲ್ಲಿಯೇ ಆರೋಪಿತರು ವಾಸಿಸುತ್ತಾರೆಂಬುದನ್ನು ಹಾಗೂ ಸರ್ವೇ ನಂ. 14 ಸರ್ಕಾರಿ ಗೋಮಾಳ ಜಾಗ ಸುಮಾರು 30 ಎಕರೆ ಜಾಗ ಎಂದರೆ ಸರಿ ಎಂದು ಒಪ್ಪಿರುತ್ತಾರೆ. ಅದೇ ರೀತಿ ಸದರಿ ಜಾಗದಲ್ಲಿ ಊರಿನ 7-8 ಜನ ಉಳುಮೆ ಮಾಡುತ್ತಿದ್ದಾರೆ ಎಂಬುದನ್ನು ಒಪ್ಪಿರುತ್ತಾರೆ. ಆರೋಪಿತರೂ ಕೂಡ ಸುಮಾರು 30-40 ವರ್ಷಗಳಿಂದ ಉಳುಮೆ ಮಾಡುತ್ತಿದ್ದಾರೆ ಎಂಬುದನ್ನು ಒಪ್ಪಿರುತ್ತಾರೆ. ಬಹಳ ಮುಖ್ಯವಾಗಿ ಪ್ರಾಸಾ-1 ತನ್ನ ಪಾಟಿ ಸವಾಲಿನಲ್ಲಿ 1 ನೇ ಆರೋಪಿಗೆ ಸರ್ಕಾರ ಸುಮಾರು 30 ವರ್ಷಗಳ ಹಿಂದೆಯೇ 18 ಗುಂಟೆ ಜಮೀನನ್ನು ಸರ್ವೇ ನಂ. 14 ರಲ್ಲಿ ಮಂಜೂರು ಮಾಡಿದೆ ಎಂಬುದನ್ನು ಒಪ್ಪಿರುತ್ತಾರೆ. ಅದೇ ರೀತಿ 2 ನೇ ಆರೋಪಿಯು ತಾನು ಉಳುಮೆ ಮಾಡುತ್ತಿದ್ದ ಜಮೀನಿಗೆ ಅಕ್ರಮ-ಸಕ್ರಮದಡಿ ಅರ್ಜಿ ಸಲ್ಲಿಸಿರುತ್ತಾರೆ ಎಂಬುದನ್ನು ಒಪ್ಪಿರುತ್ತಾರೆ. ಈ ಅಂಶಗಳು ತೋರ್ಪಡಿಸುವುದೇನೆಂದರೆ ಸರ್ವೇ ನಂ. 14 ರಲ್ಲಿ ಇರುವ 30 ಎಕರೆ ಜಮೀನು ಹಲವಾರು ಜನರಿಗೆ ಮಂಜೂರಾಗಿದ್ದು, ಆರೋಪಿತರಿಗೂ ಸದರಿ ಜಮೀನಿನಲ್ಲಿಯೇ ಜಮೀನು ಮಂಜೂರಾಗಿದ್ದು, ಅದೇ ಜಮೀನಿನಲ್ಲಿ ಸರ್ಕಾರಿ ಶಾಲೆಗೆ ಆಟದ ಮೈದಾನಕ್ಕಾಗಿ ಜಮೀನು ಮಂಜೂರಾಗಿದ್ದು, ಈ ಎಲ್ಲಾ ಜಮೀನುಗಳ ಪೋಡಿಯಾಗದ ಹೊರತು ಅಥವಾ

ಈ ಎಲ್ಲಾ ಜಮೀನುಗಳ ಗಡಿ ರೇಖೆಗಳ ಗುರುತಿಸದ ಹೊರತು ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂಬ ಅಂಶವನ್ನು ಸ್ಥಾಪಿಸುವುದು ಕಷ್ಟಸಾಧ್ಯವೆನಿಸುತ್ತದೆ.

**28**. ಮುಂದುವರೆದು, ಈ ಪ್ರಕರಣದಲ್ಲಿನ ಆರೋಪವು ಆರೋಪಿತರು 4 ಎಕರೆ 28 ಗುಂಟೆ ಸರ್ಕಾರಿ ಆಟದ ಮೈದಾನದ ಜಮೀನಿನಲ್ಲಿ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂಬುದಾಗಿದ್ದು, ಸದರಿ ಅಂಶವನ್ನು ದಾಖಲೆಗಳಿಲ್ಲದೆ ರುಜುವಾತುಪಡಿಸಲು ಅಸಾದ್ಯವಾಗಿದ್ದು, ಈ ಪ್ರಕರಣದಲ್ಲಿ ಸದರಿ ಅಂಶಕ್ಕೆ ಸಂಬಂಧಿಸಿದಂತೆ ಅಭಿಯೋಜನೆಯು ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇರುವುದೇ ಆಶ್ಚರ್ಯಕರವಾಗಿದೆ. ಈ ಪ್ರಕರಣದ ದೂರುದಾರ ಸರ್ಕಾರಿ ಅಧಿಕಾರಿಯಾಗಿದ್ದರು ಆಟದ ಮೈದಾನಕ್ಕಾಗಿ ಮಂಜೂರಾದ ಸರ್ಕಾರಿ ಜಮೀನನ ಗಡಿರೇಖೆಗಳನ್ನು ಗುರುತಿಸಿಕೊಂಡು ಕಾಪಾಡಿಕೊಳ್ಳುವ ಹೊಣೆಯನ್ನು ಹೊಂದಿದ್ದರು ಆದರೆ ಆ ರೀತಿ ಗಡಿಯನ್ನು ಗುರುತಿಸಿರುವ ಬಗ್ಗೆ ಯಾವುದೇ ಸ್ಪಷ್ಟ ದಾಖಲೆಗಳು ಇಲ್ಲದಿರುವುದು ಕಂಡುಬರುತ್ತದೆ. ಆರೋಪಿತರ ಪ್ರತಿರಕ್ಷಣೆಯು ತಾವು ಸರ್ಕಾರಿ ಶಾಲೆಯ ಜಾಗವನ್ನು ಅತ್ರಿಕಮ ಪ್ರವೇಶ ಮಾಡಿರುವುದಿಲ್ಲ, ಬದಲಿಗೆ ತಮಗೆ ಮಂಜೂರಾದಂತಹ ಜಮೀನಿನಲ್ಲಿ ಉಳುಮೆ ಮಾಡಿತ್ತಿರುವುದು ಎಂಬುದಾಗಿರುತ್ತದೆ. ಈ ಪ್ರಕರಣದಲ್ಲಿ ಆರೋಪಿತರು ಜಮೀನನ್ನು ಒತ್ತುವರಿ ಮಾಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸದೇ ಇರುದರಿಂದ ಆರೋಪಿತರ ಪ್ರತಿರಕ್ಷೆಣೆಯನ್ನು ಸಂಪೂರ್ಣವಾಗಿ ತಿರಸ್ಕರಿಸಲಾಗುವುದಿಲ್ಲ.

**29.** ಮುಂದುವರೆದದು ಈ ಪ್ರಣದಲ್ಲಿ ಪ್ರತ್ಯಕ್ಷ ಸಾಕ್ಷಿಗಳ ಸಾಕ್ಷ್ಯವನ್ನು ಗಮನಿಸಿದಾಗ ಪ್ರಸಾ-3 ರವರು ತನ್ನ ಸಾಕ್ಷ್ಯದಲ್ಲಿ ಕೇವಲ 1 ನೇ ಆರೋಪಿಯು 7 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಡಿಂರುವ ಬಗ್ಗೆ ದೂರನ್ನು ದಾಖಲಿಸಿದದ್ದ, 2 ನೇ ಆರೋಪಿಯು ಒತ್ತುವರಿ ಮಾಡಿರಕೊಂಡಿರುವ ಬಗ್ಗೆ ತಮಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಇನ್ನೂ ತಮ್ಮ ಪಾಟೀ ಸವಾಲಿನಲ್ಲಿ ತಾನು ದಿನಾಂಕ್ದ 18.07.2016 ರಂದು ಪೋಲೀಸ್ ಠಾಣೆಗೆ ಹೋಗಿದ್ದು, ಆ ದಿನಾಂಕದ ಹೊರೆತಾಗಿ ಈ್ರ ಪ್ರಕರಣದ ಕುರಿತು ಪೋಲೀಸ್ ಠಾಣೆಗೆ ಹೊಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಲ್ಲದೇ ನಿಪಿ-2 ಪಂಚನಾಮೆಯಲ್ಲಿ ಎಷ್ಟು ಅಡಿ ಹಾಗೂ ಯಾವ ದಿಕ್ಕಿಗೆ ಒತ್ತುವರಿಯಾುಗಿದೆ ಎಂದು ಬರೆದಿದೆ ಎಂದು ತನಗೆ ಗೊತ್ತಿಲ್ಲ ಎಂದು ಹಾಗೂ ತಾನು ಪೋಲೀಸರಿಗೆ ಯಾುವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಒಪ್ಪಿರುತ್ತಾರೆ. ಇನ್ನೂ ಪ್ರಾಸಾ-5 ರವರ ಸಾಕ್ಷ್ಯವನ್ನು ಗಮನಿಸಿದಾಗ ಸರ್ವೇ ನಂ 14 ರಲ್ಲಿ 4 ಎಕರೆ 28 ಗುಂಟೆ ಜಮೀನು ಪೋಡಿಯಾಗಿಲ್ಲವೆಂಬುದನ್ನು ಒಪ್ಪಿ ರುತ್ತಾರೆ. ಆದರೆ, ಸದರಿ ಸಾಕ್ಷಿಯು ಈಗಾಗಲೇ ಚರ್ಚಿಸಿದಂತೆ ಸರ್ವೇ ನಂ 14 ರಲ್ಲಿ ಆರೋಪಿತರು ಕೂಡ ಉಳುಮೆ ಮಾಡಿರುತ್ತಿರುತ್ತಾರೆಎಂಬುದನ್ನು ಒಪ್ಪಿ ರುತ್ತಾರೆ. ಈ ಎರಡು ಸಾಕ್ಷಗಳ ಸಾಕ್ಷ್ಯವನ್ನು ಗಮನಿಸಿದಾಗ, ಸದರಿ ಸಾಕ್ಷಿಗಳ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣವಾಗಿ ಪೂರಕವಾಗಿ ಹೊರಹೊಮಿ ್ಮ ರುವುದಿಲ್ಲ.

**30.** ಆದ್ದರಿಂದ, ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತರ ವಿರುದ್ಧ ಆರೋಪಿಸಿರುವ ಅಂಶಗಳನ್ನು ಒಂದು ಬಲವಾದ ಸಾಕ್ಷ್ಯದಿಂದ ರುಜುವಾತು ಪಡಿಸಲು ವಿಫಲವಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇಲ್ಲಿನ ಪಿರ್ಯಾಧಿ ಯಾವುದೇ ಒಬ್ಬ ಸಾಮಾನ್ಯ ವ್ಯಕ್ತಿಯಲ್ಲ, ಬದಲಿಗೆ ಒಂದು ಸರ್ಕಾರಿ ಸಂಸ್ಥೆಯ ಪರವಾಗಿರುತ್ತಾರೆ. ಅಂತಹ ಸಂದರ್ಭದಲ್ಲಿ ಅಭಿಯೋಜನೆಯು ಆರೋಪಿತರ ವಿರುದ್ಧದ ಆರೋಪಗಳನ್ನು ಸ್ಪಷ್ಟ ಹಾಗೂ ನಿರ್ದಿಷ್ಟ ದಾಖಲೆಗಳೊಂದಿಗೆ ರುಜುವಾತು ಪಡಿಸುವ ಹೊಣೆ ಹೊಂದಿರುತ್ತದೆ. ಈ ಪ್ರಕರಣದಲ್ಲಿ ಸದರಿ ಹೊಣೆ ನಿರ್ವಹಿಸುವಲ್ಲಿ ಅಭಿಯೋಜನೆ ಸಂಪೂರ್ಣವಾಗಿ ವಿಫಲವಾಗಿರುವುದು ಕಂಡುಬರುತ್ತದೆ ಹಾಗೂ ಈ ಎಲ್ಲಾ ಕಾರಣಗಳಿಂದ ಆರೋಪಿತರ ಮೇಲೆ ಹೊರೆಸಿರುವ ಆರೋಪಗಳ ಬಗ್ಗೆ ಸಂಶಯ ಮಾಡುತ್ತದೆ . ಆದ್ದರಿಂದ ಸಂಶಯದ ಲಾಭವನ್ನು ನೇರವಾಗಿ ಆರೋಪಿತರಿಗೆ ನೀಡಿ **1** ನೇ ಅಂಶವನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗುತ್ತದೆ.

**31.** **ಅಂಶ-2:** ಮೇಲೆ ಚರ್ಚಿಸಿರುವ ಅಂಶಗಳಿಗಾಗಿ ಈ ಕೆಳಗಿನಂತೆ,

**ಆದೇಶ**

ದಂ.ಪ್ರ.ಸಂ.ಕಲಂ **248(1)** ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಆರೋಪಿತರ ವಿರುದ್ಧ ಮಾಡಲಾದ ಭಾ.ದಂ.ಸಂ.ಕಲಂ **447** ಸಹಕಲಂ **34** ಮತ್ತು ಕಲಂಃ**192(ಎ)** ಕರ್ನಾಟಕ ಭೂ ಕಂದಾಯ ಅಧಿನಿಯಮ **1964** ರಡಿಯಲ್ಲಿ ಶಿಕ್ಷಾರ್ಹವಾದ

ಅಪರಾಧಗಳಿಂದ ಆರೋಪಿತರನ್ನು ದೋಷಮುಕ್ತಗೊಳಿಸಿ ನಿರ್ದೋಶಿಗಳೆಂದು ಖುಲಾಸೆಗೊಳಿಸಲಾಗಿದೆ.

ಆರೋಪಿತರ ಹಾಗೂ ಅವರ ಪರ ಜಾಮೀನುದಾರರು ನೀಡಿದ ಜಾಮೀನು ಮುಚ್ಚಳಿಕೆ ಪತ್ರಗಳನ್ನು ದಂ.ಪ್ರ.ಸಂ.ಕಲಂ **437**(ಎ) ರ ಸಲುವಾಗಿ ಮುಂದುವರೆಸಲಾಗಿದ್ದು, **6** ತಿಂಗಳ ಅವಧಿಯ ನಂತರ ರದ್ದುಪಡಿಸಲು ಆದೇಶಿಸಲಾಗಿದೆ.

(ಉಕ್ತಲೇಖನವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ನೀಡಿ, ಅವರು ಬೆರಳಚ್ಚು ಮಾಡಿದ ನಂತರ, ತಪ್ಪುಗಳನ್ನು ತಿದ್ದಿ, ಸರಿಪಡಿಸಿ ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ದಿಃ**21** ನೇ ಏಪ್ರಿಲ್, **2026** ರಂದು ಘೋಷಿಸಲಾಗಿದೆ)

**(ಪ್ರೀತಿ.ಕೆ)**
ಅಪರ ಸಿವಿಲ್ ನ್ಯಾಯಾಧೀಶರು & ಜೆ.ಎಂ.ಎಫ್.ಸಿ.,
ದೊಡ್ಡಬಳ್ಳಾಪುರ

**:ಅನುಬಂಧ:**

**1. ಅಭಿಯೋಜನೆ ಪರ ವಿಚಾರಿಸಲಾದ ಸಾಕ್ಷಿಗಳ ಪಟ್ಟಿಃ**

ಪ್ರಾಸಾ **:1:** ಹನುಮಂತಪ್ಪ
ಪ್ರಾಸಾ **:2:** ಬಿ.ಪಿ ಸಿದ್ದಲಿಂಗಯ್ಯ
ಪ್ರಾಸಾ **:3:** ಜಯಲಕ್ಷ್ಮೀ
ಪ್ರಾಸಾ **:4:** ಆನಂದ್
ಪ್ರಾಸಾ **:5:** ಬಸವರಾಜು
ಪ್ರಾಸಾ **:6:** ಆಂಜಿನಪ್ಪ
ಪ್ರಾಸಾ **:7:** ರಾಘವೇಂದ್ರ ಇಂಬ್ರಾಪುರ,
ಪ್ರಾಸಾ **:8:** ತಿಮ್ಮಪ್ಪ
ಪ್ರಾಸಾ **:9:** ಕೋಮಲೇಶಯ್ಯ,

**2. ಅಭಿಯೋಜನೆ ಪರ ಗುರುತಿಸಲಾದ ದಾಖಲೆಗಳ ಪಟ್ಟಿಃ**

ನಿಪಿ **:1** : ದೂರು
ನಿಪಿ **:2** : ಪಂಚನಾಮೆ

ನಿಪಿ **:3** ಮತ್ತು **4** : ಪಹಣಿ ಪತ್ರಿಕೆಗಳು
ನಿಪಿ **:5** : ಮ್ಯಟೇಶನ್ ಪ್ರತಿ
ನಿಪಿ **:6** : ಸರ್ವೇ ನಕ್ಷೆ
ನಿಪಿ **:7** : ಗ್ರಾಮ ನಕ್ಷೆ
ನಿಪಿ **:8** : ಅಧಿಕೃತ ಜ್ಞಾಪನ,
ನಿಪಿಃ **:9** : ಪ್ರಥಮ ವರ್ತಮಾನ ವರದಿ

**2. ಅಭಿಯೋಜನೆ ಪರ ಗುರುತಿಸಲಾದ ಮುದ್ದೆ ಮಾಲುಗಳ ಪಟ್ಟಿಃ**

-ಇಲ್ಲಾ-

**3. ಆರೋಪಿಗಳ ಪರ ವಿಚಾರಿಸಲಾದ ಸಾಕ್ಷಿಗಳ ಪಟ್ಟಿಃ**

-ಇಲ್ಲಾ-

**4. ಆರೋಪಿಗಳ ಪರ ಗುರುತಿಸಲಾದ ದಾಖಲೆಗಳ ಪಟ್ಟಿಃ**

-ಇಲ್ಲಾ-0

**(ಪ್ರೀತಿ.ಕೆ)**
ಅಪರ ಸಿವಿಲ್ ನ್ಯಾಯಾಧೀಶರು & ಜೆ.ಎಂ.ಎಫ್.ಸಿ.,
ದೊಡ್ಡಬಳ್ಳಾಪುರ